ಯಾಗಿಲ್ಲ ಎಂದು ಹೇಳಿರುವ ಬಗ್ಗೆ ಮಾನ್ಯ ಸಚಿವರು ಉತ್ತರಿಸುತ್ತಾ ಗವರ್ನಮೆಂಟ್‌ಗೆ ಬಂದಿದೆ ಎಂದೂ ಹೇಳಿರುತ್ತಾರೆ. ಇದರ ಬಗ್ಗೆ ಏನಾದರೂ ಪರಿಹಾರವನ್ನು ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದೂ ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತೆ ಸಾಧ್ಯವಾದಷ್ಟು ಈ ವರ್ಷದಲ್ಲಿಯೇ ಪೀಠೋಪಕರಣಗಳ ಎಲ್ಲಾ ಸವಲತ್ತುಗಳನ್ನು ಕೊಡಲು ಪ್ರಯತ್ನ ಮಾಡುತ್ತೇನೆ.

ಸದಲಗಾ–ಘೋಸರವಾಡ ರಸ್ತೆಯ ಮೇಲೆ ಸೇತುವೆ ನಿರ್ಮಿಸುವ ಬಗ್ಗೆ

೨೫ (ಎ) ಶ್ರೀ ವೀರಕುಮಾರ ಅಪ್ಪಾಸೊ ಪಾಟೀಲ್ (ನಿಪ್ಪಾಣಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸದಲಗಾ–ಘೋಸರವಾಡ ರಸ್ತೆಯ ಮೇಲೆ ದೂದಗಂಗಾ ನದಿಗೆ ಸೇತುವೆ ನಿರ್ಮಿಸುವ ಕೆಲಸ ಕುರಿತು ಕರ್ನಾಟಕ ಸರ್ಕಾರ ಹಾಗೂ ಮಹಾರಾಷ್ಟ್ರ ಸರ್ಕಾರಗಳ ನಡುವೆ ಅಂತಿಮ ನಿರ್ಣಯ ವಾಗಿದೆಯೇ

ಆ) ನಿರ್ಣಯವಾಗಿದ್ದಲ್ಲಿ ಒಪ್ಪಂದದ ವಿವರಗಳೇನು.

ಇ) ಯಾವಾಗ ಈ ಕೆಲಸವನ್ನು ಕೈಗೆತ್ತಿಕೊಳ್ಳುವಿರಿ

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ಮತ್ತು ನೀರಾವರಿ ಸಚಿವರು).—

ಅ, ಆ, ಮತ್ತು ಇ) ಮಹಾರಾಷ್ಟ್ರ ಸರ್ಕಾರದವರು ದೂದಗಂಗಾ ನದಿಯ ಮೇಲೆ ಸದಲಗಾ–ಘೋಸ್‌ರವಾಡ ರಸ್ತೆಯಲ್ಲಿ ಸೇತುವೆಯನ್ನು ಮತ್ತು ಕೂಡೂ ರಸ್ತೆಗಳ ನಿರ್ಮಾಣ ಕೆಲಸಗಳನ್ನು ತೆಗೆದುಕೊಳ್ಳಲು ಕರ್ನಾಟಕ ಸರ್ಕಾರದವರು ವೆಚ್ಚದಲ್ಲಿನ ಭಾಗವನ್ನು ಭರಿಸುವುದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೋರಿದರು. ಮಹಾರಾಷ್ಟ್ರ ಸರ್ಕಾರದವರು ಸೇತುವೆಯನ್ನು ತಮ್ಮ ವೆಚ್ಚದಲ್ಲಿ ಕಟ್ಟುವುದಾದರೆ ನಮ್ಮ ಭಾಗದ ಕೂಡು ರಸ್ತೆಯನ್ನು ರಾಜ್ಯ ಸರ್ಕಾರದ ವೆಚ್ಚದಲ್ಲಿ ಮಾಡಲು ಒಪ್ಪಿ ಕೊಂಡಿರುವುದಾಗಿ ತಿಳಿಸಲಾಗಿದೆ.

ದೂದಗಂಗಾ ನದಿಯಮೇಲೆ ಸದಲಗಾ-ಘೋಸ್‌ರವಾಡ ರಸ್ತೆಯಲ್ಲಿ ಸೇತುವೆಯನ್ನು ಕಟ್ಟಲಂ ಮಹಾರಾಷ್ಟ್ರ ಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಆಲ್ಲದೆ ಅಲ್ಲಿಯ ಸರ್ಕಾರದ ಅಧಿ ಕಾರಿಗಳು ಬಂದೂ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಸೇತುವೆಯ ಕೆಲಸಕ್ಕೆ ೭೫ ಲಕ್ಷ ರೂಪಾಯಿಂಗಳನ್ನು ಅವರು ಕೊಡುವಂತೆಯೂ ಮತ್ತು ಅಪ್ರೋಚ್ ರಸ್ತೆಗಳ ನಿರ್ಮಾಣಕಾರ್ಯಕ್ಕಾಗಿ ೨೦ ಲಕ್ಷ ರೂಪಾಯಿಂ ಗಳನ್ನು ನಾವು ಕೊಡತಕ್ಕಂಥ ಒಂದು ಒಪ್ಪಂದಕ್ಕೆ ಬಂದಿದ್ದೇವೆಂದು ತಿಳಿಸಲು ಇಚ್ಚಿಪಡುತ್ತೇನೆ.

ಶ್ರೀ ವೀರಕುಮಾರ ಅಪ್ಪಾಸೊ ಪಾಟೀಲ್.—ಅಪ್ರೋಚ್ ರೋಡ್ಸ್‌ನ ಮೇಜರ್ ರಿಪೇರಿಗಳನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದೂ ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿನ ಶಿಲಾನ್ಯಾಸಗೈದ ಕೆಲಸಗಳ ಬಗ್ಗೆ

೩೮೦. ಶ್ರೀ ಎಂ. ಎಲ್. ಉಸ್ತಾದ್. (ಬಿಜಾಪುರ).—ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯಲ್ಲಿ ೧೯೮೬–೮೭ನೇ ಸಾಲಿನಲ್ಲಿ ಶಿಲಾನ್ಯಾಸಗೈದ ಕೆಲಸಗಳ ಸಂಖ್ಯೆ ಮತ್ತು ಶಿಲಾನ್ಯಾಸಗೈದ ವ್ಯಕ್ತಿಗಳ ಹೆಸರು,

ಬ) ಶಿಲಾನ್ಯಾಸಗೈದ ಕೆಲಸಗಳು ಇನ್ನೂವರೆಗೆ ಪ್ರಾರಂಭವಾಗಿಲ್ಲದಿರುವುದು ನಿಜವೆ ?

ಕ) ಹಾಗಾದರೆ, ಈ ಕೆಲಸಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?